ಮಿನಿಸ್ಟರ್‌ರವರನ್ನು ಕೇಳಬಹುದು.

**ಚಿತ್ತಾಪುರ ತಾಲ್ಲೂಕು ಸಾಲವಾರದಲ್ಲಿ ಆರಕ್ಷಕ ಠಾಣೆಯನ್ನು ಸ್ಥಾಪಿಸುವ ಬಗ್ಗೆ.**

**(2360)** ಶ್ರೀ ಬಾಬುರಾವ್ ಚವ್ಹಾಣ್ (ಶಹಬಾದ್)ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಚಿತ್ತಾಪುರ ತಾಲ್ಲೂಕು ಸಾಲವಾರದಲ್ಲಿ ಪೋಲೀಸ್ ಠಾಣೆಯನ್ನು ಸ್ಥಾಪಿಸಲಾಗುವುದೇ ;

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಸ್ಥಾಪನೆ ಮಾಡಲಾಗುವುದು ;

ಇ) ಈ ಬಗ್ಗೆ ಸರ್ಕಾರದ ನಿಲುವು ಏನು ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು)-

ಅ) ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಆ) ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಇ) ಮಾನ್ಯ ಸದಸ್ಯರು ಈ ವಿಚಾರವನ್ನು ಈಗ ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಆದ್ಯತೆ, ಅಗತ್ಯತೆ ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನಾಧರಿಸಿ ಈ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

ಶ್ರೀ ಬಾಬುರಾವ್ ಚವ್ಹಾಣ್:- ಮಾನ್ಯ ಅಧ್ಯಕ್ಷರೇ, ಚಿತ್ತಾಪುರ ತಾಲ್ಲೂಕ್, ನಾಲ್ವಾರ್‌ನಲ್ಲಿ ಪೋಲೀಸ್ ಸ್ಟೇಷನ್‌ನ್ನು ಸ್ಥಾಪನೆ ಮಾಡಬೇಕೆಂದು ನಾನು ಕೇಳಿಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಆದ್ಯತೆಯ ಮೇರೆಗೆ ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯವರು, ಮಾನ್ಯ ಬಸವರಾಜಪಾಟೀಲ್ ಅಟ್ಟೂರೆಯವರಿಗೆ ಯಾವರೀತಿ ಟ್ರಾಫಿಕ್ ಪೋಲೀಸ್ ಸ್ಟೇಷನ್ ಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರೋ ಅದೇ ರೀತಿಯಲ್ಲಿ ನನಗೂ ಕೂಡ ಒಂದು ಪೋಲೀಸ್ ಸ್ಟೇಷನ್ ಮಂಜೂರು ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವರಾಜಪಾಟೀಲ್ ಅಟ್ಟೂರೆ ಅವರಿಗೆ ಟ್ರಾಫಿಕ್ ಪೋಲೀಸ್ ಸ್ಟೇಷನ್ ಕೊಡುತ್ತಿರುವುದು ಅವರ ಉಪಕಾರಕ್ಕೇನು ಕೊಡುತ್ತಿಲ್ಲ. ಏತಕ್ಕೆಂದರೆ ಅಲ್ಲಿ ಬಸವಕಲ್ಯಾಣದಲ್ಲಿ ಅವರು ಹೇಳಿದಹಾಗೆ ನಾಲ್ಕುಸಾವಿರ, ಐದುಸಾವಿರ ಲಾರಿಗಳ ಮೂವ್‌ಮೆಂಟ್ ಡೈಲಿ ಇದೆ. ಆದ್ದರಿಂದ ಅಲ್ಲಿಗೆ ಒಂದು ಕೊಡಬೇಕಾಗಿದೆ. ಅಲ್ಲದೆ ಅದು ಒಂದು ಸೆಂಟರ್ ಪ್ಲೇಸ್ ಇದೆ ಕೊಟ್ಟಿದ್ದೇವೆ. ಈಗ ಅವರು ಚಿತ್ತಾಪುರ ತಾಲ್ಲೂಕಿನ ನಾಲವಾರದಲ್ಲಿ ಒಂದು ಪೋಲೀಸ್ ಸ್ಟೇಷನ್ ಬೇಕೆಂದು ಕೇಳಿದ್ದಾರೆ. ಈಗಾಗಲೇ ನಾನು ಹೇಳಿದಹಾಗೆ ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಜನಸಂಖ್ಯೆಗೆ ಅನುಗುಣವಾಗಿ ಇವತ್ತು 1300 ಪೋಲೀಸ್ ಸ್ಟೇಷನ್‌ಗಳು ಬೇಕಾಗಿದೆ. ಅಂದರೆ ಪ್ರತಿ 50 ಸಾವಿರ ಜನಸಂಖ್ಯೆಗೆ ಒಂದು ಪೋಲೀಸ್ ಸ್ಟೇಷನ್ ಬೇಕಾಗಿರತಕ್ಕಂಥದ್ದನ್ನು ಮಾನ್ಯ ಧರ್ಮವೀರ ಸಮಿತಿಯವರು ಕೂಡ ನಿರ್ಧಾರ ಮಾಡಿದ್ದಾರೆ. ಈದ ಸಧ್ಯಕ್ಕೆ 496 ಪೋಲೀಸ್ ಸ್ಟೇಷನ್‌ಗಳನ್ನು ಮತ್ತು ಹೋದವರ್ಷದಲ್ಲಿ 15 ಪೋಲೀಸ್ ಸ್ಟೇಷನ್‌ಗಳು, ಹತ್ತು ಔಟ್‌ಪೋಸ್ಟ್ ಪೋಲೀಸ್ ಸ್ಟೇಷನ್‌ಗಳನ್ನು ಕೂಡ ನಾವು ಕೊಟ್ಟಿದ್ದೇವೆ. ಮಾನ್ಯ ಧರ್ಮವೀರ, ನ್ಯಾಷನಲ್ ಪೋಲೀಸ್ ಕಮೀಷನರೆಂದು ಪ್ರತಿಯೊಂದು ವರ್ಷಕ್ಕೆ 15 ಪೋಲೀಸ್ ಸ್ಟೇಷನ್ಸ್‌ನಂತೆ 5 ವರ್ಷಗಳ ಅವಧಿಯಲ್ಲಿ 55 ಪೋಲೀಸ್ ಸ್ಟೇಷನ್‌ಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಅದು ಕೂಡ ಸಾಲದು. ಮಾನ್ಯ ವಿರೋಧಪಕ್ಷದ ನಾಯಕರಿಗೂ ಗೊತ್ತು. ಬಾರ್ಡರ್ ಜಿಲ್ಲೆಗಳಲ್ಲಿ ಸಾಕಷ್ಟು ದರೋಡೆಗಳು, ಬೇರೆ ಬೇರೆ ಪ್ರಕರಣಗಳು ಇನ್‌ಕ್ರೀಸ್ ಆಗುತ್ತಿಗೆ. ಆದ್ದರಿಂದ ಕರ್ನಾಟಕ ರಾಜ್ಯದಲ್ಲಿ 1992-93ನೇ ಸಾಲಿನಲ್ಲಿ 43 ಪೋಲೀಸ್ ಸ್ಟೇಷನ್‌ಗಳನ್ನು ಮಾಡಬೇಕೆಂದು ಸರ್ಕಾರದಲ್ಲಿದೆ. ಇವತ್ತು ಪ್ರಶ್ನೆ ಕೇಳಿದ ಹಾಗೆ ಎಲ್ಲ ಕಡೆ ಮಾಡಿಕೊಡತಕ್ಕಂಥದ್ದಲ್ಲ. ಜನಸಂಖ್ಯೆಗೆ ಅನುಗುಣವಾಗಿ ಪ್ರತಿ ಜಿಲ್ಲೆಗೂ ಕೊಡಬೇಕಾಗಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ಚಿತ್ತಾಪುರ ತಾಲ್ಲೂಕು ಕೂಡ ಬಹಳ ದೊಡ್ಡ ತಾಲ್ಲೂಕಾಗಿದೆ. ನಮಗೆ ರಿಸೋರ್ಸಸ್ ಪರ್ಮಿಟ್

ಮಾಡಿದರೆ ಹೇಗೆ ಮಾಡಬೇಕೆನ್ನತಕ್ಕಂಥದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಆದರೂ ಕೂಡ ಎಲ್ಲೆಲ್ಲಿ ಮಾನ್ಯ ಸದಸ್ಯರು ಪೋಲೀಸ್ ಸ್ಟೇಷನ್ ಬೇಕೆಂದು ಕೇಳಿದ್ದಾರೆ, ಕೇಳಿದ ಮೇಲೆ ಅಲ್ಲೆಲ್ಲ ಕೊಡಬೇಕೆಂದು ಇಲ್ಲ. ಸರ್ಕಾರದಲ್ಲಿ ರಿಪೋರ್ಟ್ ಇದೆ, ಎಲ್ಲೆಲ್ಲಿ ಪೋಲೀಸ್ ಸ್ಟೇಷನ್ ಬೇಕಾಗಿದೆ, ಎಲ್ಲೆಲ್ಲಿ ಅವಶ್ಯಕತೆ ಇದೆ ಎಂದು ವರದಿ ಬಂದಿದೆ. ಆ ಪ್ರಕಾರ ಹಂತಹಂತವಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ತಾವು ಧರ್ಮವೀರ ಸಮಿತಿ ವಿಚಾರ ಹೇಳಿ, ಪೋಲೀಸ್ ಸ್ಟೇಷನ್‌ಗಳನ್ನು ಎಷ್ಟು ಮಾಡಬೇಕೆಂದು ಹೇಳಿದಿರಿ. ಧರ್ಮವೀರ ಸಮಿತಿ ಅವರು ಕೊಟ್ಟಿರತಕ್ಕ ವರದಿಯನ್ನು ಸಂಪೂರ್ಣವಾಗಿ ಸರ್ಕಾರ ಒಪ್ಪಿದೆಯೆ ? ತಾವು ಗಡಿ ಪ್ರದೇಶದ ತಾಲ್ಲೂಕುಗಳಿಗೆ ಹೆಚ್ಚಿನ ರೀತಿಯಲ್ಲಿ ಬಂದೋಬಸ್ತ್ ವ್ಯವಸ್ಥೆ ಮಾಡಬೇಕೆಂದು ನೀತಿ ಇದೆ ಎಂದು ಹೇಳಿದ್ದೀರಿ. ತಾವು ನಮ್ಮ ಚಾಮರಾಜನಗರಕ್ಕೆ ಬಂದಾಗ ಗಡಿ ಪ್ರದೇಶದಲ್ಲಿ ಪೋಲೀಸ್ ಸ್ಟೇಷನ್ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ. ಈ ರೀತಿ ಗಡಿ ಪ್ರದೇಶಗಳ ಬೆಳವಣಿಗೆ ಮತ್ತು ಭದ್ರತೆಯ ದೃಷ್ಟಿಯಿಂದ ಪೋಲೀಸ್ ಸ್ಟೇಷನ್ ಕೊಡತಕ್ಕ ತೀರ್ಮಾನ ತೆಗೆದುಕೊಂಡಿದ್ದೀರಾ ? ಧರ್ಮವೀರ ಸಮಿತಿ ವರದಿಯನ್ನು ಒಪ್ಪಿದ್ದೀರಾ ?

ಶ್ರೀ ಧರ್ಮಸಿಂಗ್:-ಸರ್ಕಾರಕ್ಕೆ ವರದಿ ಕೊಟ್ಟ ಮೇಲೆ ಪಾರ್ಟ್ಸ್ ರೆಕಮಂಡೇಷನ್ ಒಂದೊಂದಾಗಿ ಒಪ್ಪಿಕೊಂಡಿದ್ದೇವೆ, ಎಲ್ಲವನ್ನು ಒಪ್ಪಿಕೊಂಡಿಲ್ಲ. ಅವರು ಬಹಳಷ್ಟು ಉಲ್ಲೇಖ ಮಾಡಿದ್ದಾರೆ. ಪೋಲೀಸ್ ಇಲಾಖೆಯನ್ನು ಶಕ್ತಿಯುತವಾದ ಇಲಾಖೆ ಮಾಡಬೇಕೆಂಬ ರೀತಿಯಲ್ಲಿ ಸಲಹೆ ಕೊಟ್ಟಿದ್ದಾರೆ. 1991-92ರಲ್ಲಿ ಕೆಲವನ್ನು ಒಪ್ಪಿಕೊಂಡು ಅನುಷ್ಠಾನಕ್ಕೆ ತಂದಿದ್ದೇವೆ. ಕಾವೇರಿ ಘಟನೆ ಏನಾಯಿತು ಅದರ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಮತ್ತು ಗಡಿ ಪ್ರದೇಶಗಳಲ್ಲಿ ಹೆಚ್ಚಿನ ಪೋಲೀಸ್ ಸ್ಟೇಷನ್ ಮಾಡಬೇಕೆಂದು ಸರ್ಕಾರ ನಿರ್ಧಾರ ತೆಗೆದುಕೊಂಡ ರೀತ್ಯಾ 40 ಪೋಲೀಸ್ ಸ್ಟೇಷನ್‌ಗಳನ್ನು 92-93ನೇ ಸಾಲಿನಲ್ಲಿ ಕೊಡಬೇಕು, ಹೆಚ್ಚು ಕಾನ್‌ಸ್ಟೇಬಲ್‌ಗಳನ್ನು ರೆಕ್ರೂಟ್ ಮಾಡಬೇಕೆಂದು 40 ಕೋಟಿ ರೂಪಾಯಿಗಳನ್ನು ಸರ್ಕಾರ ಇಟ್ಟಿದೆ. ಇದು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್, ಇದನ್ನು ಇನ್ನೂ ಪ್ಲಾನ್‌ನಲ್ಲಿ ಅಳವಡಿಸಿಲ್ಲ. ಆದರೂ ಕೂಡ 1991-92, 92-93ನೇ ಸಾಲಿನಲ್ಲಿ ವಿಶೇಷವಾಗಿ ಏನೇನು ಬಡ್ಜೆಟ್ಟಿನಲ್ಲಿ ನಿಗದಿ ಮಾಡಿದ್ದೇವೆ, ಅದರಂತೆ 67 ಕೋಟಿ ರೂಪಾಯಿಗಳನ್ನು ಪೋಲೀಸ್ ಸ್ಟೇಷನ್ ಮತ್ತು ಸಿಬ್ಬಂದಿಯನ್ನು ಹೆಚ್ಚಿಸುವುದಕ್ಕೆ ಇಟ್ಟಿದ್ದೇವೆ. ಗಡಿ ಪ್ರದೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ಚಾಮರಾಜನಗರ, ಗುಂಡ್ಲುಪೇಟೆ, ನಂಜನಗೂಡು ಯಾವುದೇ ಆಗಲಿ ಎಲ್ಲಾ ಭಾಗದಲ್ಲಿ ಹೆಚ್ಚಿನ ಪೋಲೀಸ್ ಸ್ಟೇಷನ್ ತೆರೆಯತಕ್ಕುದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಅದನ್ನು 1992-93ರಲ್ಲಿ ನಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಗುಂಡ್ಲುಪೇಟೆ, ಕೊಳ್ಳೇಗಾಲ, ಚಾಮರಾಜನಗದರ ಮತ್ತು ನಂಜನಗೂಡು ಈ 4 ಪ್ರದೇಶಗಳಿಗೆ ಪೋಲೀಸ್ ಸ್ಟೇಷನ್ ಕೊಡುತ್ತೀರಾ ?

ಶ್ರೀ ಧರ್ಮಸಿಂಗ್: ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎನ್.ಜಿ.ನಾಯಕ್ :- ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ, ನಮ್ಮದೂ ಗಡಿ ಪ್ರದೇಶ. ನಮ್ಮ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಪೋಲೀಸ್ ಸ್ಟೇಷನ್ ಇಲ್ಲ. ಅದನ್ನು ಮಾಡಿಕೊಡಬೇಕೆಂದು ಆ ಭಾಗದ ಜನರ ಪರವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ನಾಯಕ್ ಅವರು ಪದೇ ಪದೇ ಭೇಟಿ ಮಾಡಿ ಹೇಳಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಅಂಜನಮೂರ್ತಿ:- ರಾಷ್ಟ್ರೀಯ ಹೆದ್ದಾರಿ-4 ನೆಲಮಂಗಲದ ಮೂಲಕ ಹಾದು ಹೋಗುತ್ತದೆ. ಆ ರಸ್ತೆಯಲ್ಲಿ ಎಲ್ಲಾ ಮಂತ್ರಿಗಳೂ ಓಡಾಡುವುದು. ಯಶವಂತಪುರದಿಂದ ನೆಲಮಂಗಲದವರೆಗೆ ಅತ್ಯಧಿಕ ವಾಹನ ಸಂಚಾರ ಇರುತ್ತದೆ. ದಾಸನಪುರದ ಹೋಬಳಿ ಹತ್ತಿರ T.C.I., ಪ್ರಕಾಶ್ ರೋಡ್‌ಲೈನ್ಸ್, ಪಟೇಲ್

ರೋಡ್‌ವೇಸ್, ಬರೂಕ ರೋಡ್‌ಲೈನ್ಸ್ ಈ ರೀತಿ ನೂರಾರು ವಾಹನಗಳ ಕಂಪನಿಗಳು ಇವೆ. ಅಲ್ಲಿ ಸಾವಿರಾರು ವಾಹನಗಳು ನಿಂತು ದರೋಡೆ, ಕೊಲೆ ಸುಲಿಗೆ ಆಗುತ್ತಿರುತ್ತದೆ. ನಾನು ಮಂತ್ರಿಗಳನ್ನು ಪ್ರಾರ್ಥಿಸಿಕೊಂಡೆ, ಅಲ್ಲಿ ಸಂಚಾರಿ ಆರಕ್ಷಕ ಠಾಣೆಯನ್ನು ಮಾಡಿಕೊಡುತ್ತೀರಾ ?

ಶ್ರೀ ಧರ್ಮಸಿಂಗ್:- ನಾನು ಅಂಜನಮೂರ್ತಿಯವರ ಕ್ಷೇತ್ರಕ್ಕೆ ಹೋಗಿದ್ದೆ. ಅವರು ನಾವು ಕೂಡಿ ವಿಚಾರ ಮಾಡಿದ್ದೇವೆ. ಅದು ಸರ್ಕಾರದ ಗಮನದಲ್ಲಿದೆ. 1992-93 ರಲ್ಲಿ ನೋಡೋಣ.

ಶ್ರೀ ಎಸ್.ಹೆಚ್.ಕೌಜಲಗಿ:- ಇವತ್ತಿನ ದಿವಸ ರಾಜ್ಯದಲ್ಲಿ ಹೆಚ್ಚಿಗೆ ಗುನ್ನೆ ಆಗುವುದು ಬೈಲಹೊಂಗಲ ತಾಲ್ಲೂಕಿನಲ್ಲಿ. ರಾಜ್ಯದಲ್ಲಿ ಹೆಚ್ಚಿಗೆ ಮರ್ಡರ್ ಆಗತಕ್ಕುದ್ದು, ಬೈಲಹೊಂಗಲ ತಾಲ್ಲೂಕಿನಲ್ಲಿ.. ಅಂಥದ್ದರಲ್ಲಿ ದೊಡ್ಡವಾಳದಲ್ಲಿ ಒಂದು ಪೋಲೀಸ್ ಸ್ಟೇಷನ್ ಬೇಕೆಂದು ಕೇಳಿ ಬಹಳ ವರ್ಷವಾಯಿತು. ಪರಿಶೀಲಿಸುತ್ತೀವೆಂದು ಹೇಳುತ್ತಾರೆ. ಅಲ್ಲಿ ಒಂದು ಮರ್ಡರ್ ಆದರೆ ಪೋಲೀಸ್ ಸ್ಟೇಷನ್‌ಗೆ ಹೋಗಬೇಕೆಂದರೆ 30 ಕಿಲೋಮೀಟರ್ ದೂರ ಹೋಗಬೇಕಾಗುತ್ತದೆ. 30 ಕಿಲೋಮೀಟರ್ ಹೋಗಬೇಕೆಂದರೆ ಪರಿಸ್ಥಿತಿ ಏನಾಗುತ್ತದೆ ? ಆದ್ದರಿಂದ ದೊಡ್ಡವಾಳದಲ್ಲಿ ಪೋಲೀಸ್ ಸ್ಟೇಷನ್ ಬೇಕೆಂದು ಬಹಳ ದಿನಗಳಿಂದ ಈ ಬೇಡಿಕೆ ಇದೆ. ಅಲ್ಲಿಗೆ ಒಂದು ಪೋಲೀಸ್ ಸ್ಟೇಷನ್ ಕೊಡಬೇಕು. ಪಡುವಾಳದಲ್ಲಿ ಅಥವಾ ಬೈಲಹೊಂಗಲಕ್ಕೆ ಒಂದು ಔಟ್‌ಪೋಸ್ಟ್ ಪೋಲೀಸ್ ಸ್ಟೇಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಕೌಜಲಗಿಯವರು ಹೇಳಿದ್ದಾರೆ. ಬೈಲಹೊಂಗಲ ಕೂಡ ದೊಡ್ಡದಾದ ತಾಲ್ಲೂಕು, ಅದು ಗೊತ್ತಿದೆ. ಒಂದೊಂದಾಗಿ ನೋಡೋಣ ಕೌಜಲಗಿಯವರೆ, ಈಗ ಪರಿಶೀಲನೆ ಮಾಡುತ್ತೇವೆ, ನೋಡುತ್ತೇನೆ ಎಂಬ ಮಾತಲ್ಲ. 5 ವರ್ಷದಲ್ಲಿ 55 ಪೋಲೀಸ್ ಸ್ಟೇಷನ್ ಮಾಡಬೇಕೆಂದು ಧರ್ಮವೀರ ಆಯೋಗದ ಶಿಫಾರಸ್ಸು ಇದ್ದರೂ ಕೂಡ ಒಂದು ವರ್ಷದಲ್ಲಿ 15 ಪೋಲೀಸ್ ಸ್ಟೇಷನ್ ಮಾಡಿದ್ದೇವೆ. ಆದರೂ ಸಹ 1992-93 ನೇ ಸಾಲಿನಲ್ಲಿ 40 ಪೋಲೀಸ್ ಸ್ಟೇಷನ್ಸ್ ತೆಗೆಯತಕ್ಕ ಸರ್ಕಾರದ ಪ್ರಯತ್ನ ಇದ್ದರೂ ಕೂಡ ಅದ ಸಾಕಾಗುವುದಿಲ್ಲ. ಈಗಾಗಲೇ ನಾನು ಹೇಳಿದ್ದೇನೆ, ಜನಸಂಖ್ಯೆಗೆ ಅನುಗುಣವಾಗಿ, 1200, 1300 ಪೋಲೀಸ್ ಸ್ಟೇಷನ್ಸ್ ಕರ್ನಾಟಕ ರಾಜ್ಯದಲ್ಲಿ ಬೇಕಾಗಿದೆ. ಎಲ್ಲಾ ಕಡೆ ಬೇಡಿಕೆ ಇದೆ, ಇಲ್ಲ ಎಂದು ಹೇಳುವುದಿಲ್ಲ. ಅದಕ್ಕೆ ನಾವು ಸ್ವಲ್ಪ ವ್ಯವಸ್ಥಿತವಾಗಿ ರಿಪೋರ್ಟ್ ಆಧಾರದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಎಂ.ನಾರಾಯಣ ಸ್ವಾಮಿ: ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಈಗಾಗಲೇ ನಾನು ಅವರಿಗೆ ಪ್ರಸ್ತಾವನೆ ಕೊಟ್ಟಿದ್ದೇನೆ. ಕೆ.ಜಿ.ಎಫ್. ಸಿಟಿ ದೊಡ್ಡ ಟ್ರಾಫಿಕ್ ಇರುವ ಏರಿಯಾ. ಜೊತೆಗೆ ಬಂಗಾರಪೇಟೆ ತಾಲ್ಲೂಕು ಮತ್ತು ಬೇತಮಂಗಲ ಕ್ಷೇತ್ರ ಸುಮಾರು 158 ಕಿಲೋಮೀಟರ್ ಗಡಿನಾಡಿಗೆ ಸೇರತಕ್ಕುದು. ಒಂದು ಕಡೆ ತಮಿಳುನಾಡಿನ ಗಡಿಯಾಗಿದೆ, ಇನ್ನೊಂದು ಕಡೆ ಆಂಧ್ರಪ್ರದೇಶದ ಗಡಿಗೆ ಸೇರುತ್ತದೆ. ಈಗಾಗಲೇ ಪ್ರಸ್ತಾವನೆ ಕೂಡ ಕೊಟ್ಟಿದ್ದೇನೆ. ಟ್ರಾಫಿಕ್ ಪೋಲೀಸ್ ಸ್ಟೇಷನ್ ಕೆ.ಜಿ.ಎಫ್.ಗೆ ಮಾಡಬೇಕು. ಪೋಲೀಸ್ ಇಲಾಖೆಯಲ್ಲಿ ಕೆ.ಜಿ.ಎಫ್. ಜಿಲ್ಲೆ ಎಂದಿದೆ. ಅಲ್ಲಿರತಕ್ಕ ಕಾನ್‌ಸ್ಟೇಬಲ್‌ಗಳು ಅಲ್ಲೇ ಅಪಾಯಿಂಟ್ ಆಗಿ ಅಲ್ಲೇ ರಿಟೈರ್ ಆಗುತ್ತಾರೆ. ಅವರನ್ನು ಇಡೀ ಕೋಲಾರ ಜಿಲ್ಲೆಗೆ ವರ್ಗಾವಣೆ ಮಾಡತಕ್ಕ ಕೆಲಸ ಮಾಡುತ್ತೀರಾ? ಪ್ರಸ್ತಾವನೆ ಕೂಡ ಕಳುಹಿಸಿಕೊಟ್ಟಿದ್ದೇನೆ. ಪೋಲೀಸರ ಹಿತದೃಷ್ಟಿಯಿಂದ ಅಲ್ಲಿ . . . .

ಉಪಾಧ್ಯಕ್ಷರು:- ಬೇರೆ ಪ್ರಶ್ನೆ ಹಾಕಿ.

ಶ್ರೀ ಎಂ.ನಾರಾಯಣ ಸ್ವಾಮಿ :- ಅವರನ್ನು ವರ್ಗಾವಣೆ ಮಾಡುವಂಥ ಕ್ರಮ ಕೈಗೊಳ್ಳುತ್ತೀರಾ ? ಮತ್ತು ಕೆ.ಜಿ.ಎಫ್.ನಲ್ಲಿ ಟ್ರಾಫಿಕ್ ಪೋಲೀಸ್ ಸ್ಟೇಷನ್ ತೆರೆಯುತ್ತೀರಾ?

ಶ್ರೀ ಧರ್ಮಸಿಂಗ್:- ಪ್ರತ್ಯೇಕ ಪ್ರಶ್ನೆ ಕೇಳಿ, ನೋಡೋಣ. ಇದು ಚಿತ್ತಾಪುರ ತಾಲ್ಲೂಕಿಗೆ ಸಂಬಂಧಪಟ್ಟ ಪ್ರಶ್ನೆ. ವಾಟಾಳ್ ನಾಗರಾಜ್ ಅವರು ಕೇಳಿದಾಗ ಇಡೀ ರಾಜ್ಯದ ಪ್ರಶ್ನೆಯಾಗಿದೆ. ಅದಕ್ಕೆ ಕೂಡ ಉತ್ತರ ಕೊಟ್ಟಿದ್ದೇನೆ. ಕೆ.ಜಿ.ಎಫ್. ನಲ್ಲಿರತಕ್ಕ ಕಾನ್‌ಸ್ಟೇಬಲ್‌ಗಳನ್ನು ವರ್ಗಾಯಿಸುವ ಬಗ್ಗೆ ಹೇಳಿದ್ದಾರೆ.

ಅದರ ಬಗ್ಗೆ ಕೂಡ ನೋಡೋಣ.

**1991-92ನೇ ಸಾಲಿನಲ್ಲಿ ಯೋಜನಾ ಅಡಿಯಲ್ಲಿ ಕಾದಿರಿಸಲಾದ**

(1520) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ)- ಯೋಜನಾ ಸಾಂಖ್ಯಿಕ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) 1991-92ನೇ ಸಾಲಿನಲ್ಲಿ ಯೋಜನಾ ಅಡಿಯಲ್ಲಿ ಕಾದಿರಿಸಲಾದ ಹಣ ( ವಿವಿಧ ವಲಯವಾರು ಗೊತ್ತುಪಡಿಸಿದ ಹಣವನ್ನು ಒದಗಿಸುವುದು ಮತ್ತು ಜಿಲ್ಲಾವಾರು ವಿವರಣೆಯನ್ನು ಒದಗಿಸುವುದು);

ಆ) ಬಿಡುಗಡೆ ಮಾಡಿದ ಹಾಗೂ ಖರ್ಚು ಮಾಡಲಾದ ಹಣ (ವಲಯವಾರು ಮತ್ತು ಜಿಲ್ಲಾವಾರು ವಿವರಗಳನ್ನು ಒದಗಿಸುವುದು);

ಇ) ಪೂರ್ತಿ ಹಣ ಬಿಡುಗಡೆ ಮಾಡಲಾಗಿದೆಯೇ ? ಇಲ್ಲದಿದ್ದಲ್ಲಿ ಸರ್ಕಾರವು ಈ ಹಣವನ್ನು ಯಾವಾಗ ಬಿಡುಗಡೆ ಮಾಡಲು ಉದ್ದೇಶಿಸಿದೆ ?

ಶ್ರೀಮತಿ ಕೆ.ಎಸ್.ನಾಗರತ್ನಮ್ಮ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆ ಸಚಿವರು.)-

ಅ) 1991-92ನೇ ಸಾಲಿನಲ್ಲಿ ಒಟ್ಟು 1557.80 ಕೋಟಿ ರೂಪಾಯಿಗಳನ್ನು ಯೋಜನಾ ಕಾರ್ಯಕ್ರಮಗಳಿಗಾಗಿ ರಾಜ್ಯ ಯೋಜನೆ ಅಡಿಯಲ್ಲಿ ಒದಗಿಸಲಾಗಿದೆ. ಈ ಹಣದಲ್ಲಿ ವಲಯವಾರು ಒದಗಿಸಿದ ಹಣದ ವಿವರ ಈ ಕೆಳಗಿನಂತಿದೆ.

| ವಲಯ | 1991-92ನೇ ಸಾಲಿನಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಒದಗಿಸಲಾದ ಹಣ |
|---|---|
| ರಾಜ್ಯ ವಲಯ | 1200.34 ಕೋಟಿ ರೂಪಾಯಿಗಳು |
| ಜಿಲ್ಲಾ ವಲಯ | 357.46..ಕೋಟಿ ರೂಪಾಯಿಗಳು |
| ಒಟ್ಟು | 1557.80 ಕೋಟಿ ರೂಪಾಯಿಗಳು |

1991-92ನೇ ಸಾಲಿನಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಜಿಲ್ಲಾ ವಲಯ ಯೋಜನಾ ಕಾರ್ಯಕ್ರಮಗಳಿಗೆ ಜಿಲ್ಲಾವಾರು ಒದಗಿಸಿದ ಹಣದ ವಿವರವನ್ನು ಅನುಬಂಧ-1ರಲ್ಲಿ ಕೊಡಲಾಗಿದೆ.

ಆ) 1991-92ನೇ ಸಾಲಿನಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಒದಗಿಸಲಾದ ಒಟ್ಟು ಹಣ 1557.80 ಕೋಟಿ ರೂಪಾಯಿಗಳಲ್ಲಿ ಜನವರಿ 92ರವರೆಗೆ ಖರ್ಚು ಮಾಡಲಾದ ಹಣ 979-50 ಕೋಟಿ ರೂ.ಗಳು. ವಲಯವಾರು ವೆಚ್ಚದ ವಿವರ ಈ ಕೆಳಕಂಡಂತಿದೆ.

| ವಲಯ | ರಾಜ್ಯ ಯೋಜನೆಯಡಿಯಲ್ಲಿ ಜನವರಿ 92ರವರೆಗೆ ಖರ್ಚು ಮಾಡಲಾದ ಹಣ |
|---|---|